# <u>ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಕಛೇರಿ, ತುರುವನೂರು ರಸ್ತೆ, ಚಿತ್ರದುರ್ಗ</u>

**ಸಂ:ಪ್ರಾಸಾಅ/ಚಿದು/ಮಾಹಸೂ/ಸಿ/2007-08, ದಿ:31-03-2017**

**2005 ರ ಮಾಹಿತಿಹಕ್ಕು ಅದಿನಿಯಮ ಕಲಮು 4(1)ಎ ಮತ್ತು 4(1)ಬಿ ಅಡಿಯಲ್ಲಿ ನಿಗದಿಪಡಿಸಿದಂತೆ ಹೊರಡಿಸಲಾದ ಅದಿಸೂಚನೆ.**

ಸಂಸ್ಥೆಯ ಹೆಸರು : ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಕಛೇರಿ
ವಿಳಾಸ : ತುರುವನೂರು ರಸ್ತೆ ಚಿತ್ರದುರ್ಗ

<u>ಸಾರ್ವಜನಿಕ ಅಧಿಕಾರಿಗಳ ಹೊಣೆಗಾರಿಕೆ:</u>

<u>(1) ಪ್ರತಿಯೊಬ್ಬ ಸಾರ್ವಜನಿಕ ಅಧಿಕಾರಿಯು–</u>

(ಎ) ಈ ಅಧಿನಿಯಮದಡಿ ಮಾಹಿತಿ ಹಕ್ಕನ್ನು ಒದಗಿಸಲು ಅನುಕೂಲವಾಗುವಂತೆ ತನ್ನ ಎಲ್ಲಾ ಅಡಿಯಲ್ಲಿರುವ ದಾಖಲೆಗಳನ್ನು ಸೂಕ್ತವಾಗಿ ಗ್ರಂಥಸೂಚಿ ಮತ್ತು ಸೂಚಿಯ ರೀತಿಯಲ್ಲಿ ಮಾಡಿ ಗಣಕಯಂತ್ರೀಕರಿಸಿ ಪ್ರಾಪ್ತವಾದ ಎಲ್ಲಾ ಮಾಹಿತಿಯನ್ನು ಅಂತಜ್ರಾಲದ ಮೂಲಕ ಸಂಪರ್ಕ ಏರ್ಪಡಿಸುವುದು.

ಈ ಪ್ರಾಧಿಕಾರವು ಎಲ್ಲಾ ತರಹದ ವಾಹನಗಳ ನೊಂದಣಿ ಮತ್ತು ಚಾಲನಾ ಅನುಜ್ಞಾಪತ್ರ ನಿರ್ವಾಹಕ ಅನುಜ್ಞಾಪತ್ರ ಮತ್ತು ವಾಹನಗಳ ತನಿಖೆ ಇವು ಪ್ರಧಾನ ಕರ್ತವ್ಯಗಳಾಗಿದ್ದು ಈ ಕುರಿತು ಮಾಹಿತಿಯು ಸೂಚಿಯ ರೀತಿಯಲ್ಲಿ ಭೌತಿಕವಾಗಿ ಇಡಲಾಗಿದೆ. ಆದರೆ, ಇನ್ನೂ ಈ ಕಛೇರಿಯು ಸಂಪೂರ್ಣ ಗಣಕೀಕೃತಗೊಂಡಿರದೆ ಇರುವುದರಿಂದ ಅಂತರ್ಜಾಲದ ಮೂಲಕ ಪ್ರಚೂರಪಡಿಸಲಾಗಿರುವುದಿಲ್ಲ. ಸಂಪೂರ್ಣ ಗಣಕೀಕೃತಗೊಂಡ ನಂತರ ಸೂಕ್ತಕ್ರಮ ಜಾರಿಯಲ್ಲಿರುವುದು.

# ಅಧ್ಯಾಯನ-1

## ಸಾರ್ವಜನಿಕ ಸಂಸ್ಥೆಯ ಕರ್ತವ್ಯಗಳು ಮತ್ತು ಪ್ರಕಾರಗಳು

## [ಭಾಗ 4(1)(ಎ)(i)]

**ಸಾರ್ವಜನಿಕ ಸಂಸ್ಥೆಯ ಕರ್ತವ್ಯ ಮತ್ತು ಪ್ರಕಾರಗಳ ವಿವರ**

**4.(1)(ಎ)**

**i) ಸಂಘಟನೆ, ಪ್ರಕಾರಗಳು ಮತ್ತು ಕರ್ತವ್ಯಗಳು:-**

ಈ ಕಛೇರಿಯು ದಿನಾಂಕ:18-02-1958 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಕಛೇರಿಯಾಗಿ ಆರಂಭಗೊಂಡಿರುತ್ತದೆ. ಸರ್ಕಾರಿ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ ಮತ್ತು ಸಂಘನಾ ವ್ಯವಸ್ಥೆ ಈ ಕೆಳಕಂಡಂತಿರುತ್ತದೆ.



ಪ್ರಕಾರಗಳು ಮತ್ತು ಕರ್ತವ್ಯಗಳು:

ಈ ಕಛೇರಿಯು ಪ್ರಧಾನವಾಗಿ ಮೋಟಾರು ವಾಹನಗಳ ನಿಯಮಗಳನ್ನು ಪ್ರವರ್ತಿಸಿ ವಾಹನಗಳ ತನಿಖಾಯಿಸಿ ತೆರಿಗೆ ದಂಡ ವಸೂಲಿ ಮಾಡುವುದು ಮತ್ತು ಚಾಲನಾ ಅನುಜ್ಞಾ ಪತ್ರ, ನಿರ್ವಾಹಕ ಅನುಜ್ಞಾಪತ್ರ, ಚಾಲನಾ ತರಬೇತಿ ಶಾಲೆಗಳ ಅನುಜ್ಞಾಪತ್ರ, ವಾಹನ ಮಾರಾಟಗಾರರಿಗೆ ಟ್ರೇಡ್ ಸರ್ಟಿಫಿಕೇಟ್ ಮತ್ತು ನುಮೋದಿತ ವಾಹನಗಳಿಗೆ ರಹದಾರಿ ನೀಡುವುದು ಪ್ರಧಾನ ಪ್ರಕಾರ್ಯಗಳಾಗಿರುತ್ತವೆ.

ಕರ್ತವ್ಯಗಳು:

- ವಾಹನಗಳ ತಾತ್ಕಾಲಿಕ ಮತ್ತು ನೊಂದಣಿ ಮಾಡುವುದು ಮತ್ತು ನವೀಕರಿಸುವುದು,
- ಕಲಿಕಾ ಮತ್ತು ಚಾಲನಾ ಅನುಜ್ಞಾಪತ್ರ ನೀಡುವುದು,
- ನಿರ್ವಾಹಕ ಅನುಜ್ಞಾಪತ್ರ ನೀಡುವುದು,
- ವಾಹನ ಚಾಲನಾ ತರಬೇತಿ ಶಾಲೆಗಳಿಗೆ ಅನುಜ್ಞಾಪತ್ರ ನೀಡುವುದು,
- ಅಧಿಕೃತ ವಾಹನ ಮಾರಾಟಗಾರರಿಗೆ ಟ್ರೇಡ್ ಸರ್ಟಿಫಿಕೇಟ್ ನೀಡುವುದು,
- ವಾಹನಗಳ ತನಿಖೆಮಾಡುವುದು,
- ಸಾರಿಗೆ ವಾಹನಗಳಿಗೆ ಅರ್ಹತಾಪತ್ರ ನೀಡುವುದು ಮತ್ತು ನವೀಕರಿಸುವುದು,
- ಅಪಘಾತಗೊಂಡ ವಾಹನಗಳನ್ನು ಪರಿಶೀಲಿಸಿ ವರದಿ ನೀಡುವುದು,
- ನೊಂದಣಿ ಮಾಡಿದ ವಾಹನಗಳ ಬಿ–ವಹಿ ನಿರ್ವಹಿಸುವುದು,
- ಚಾಲನಾ ಮತ್ತು ನಿರ್ವಾಹಕ ಅನುಜ್ಞಾಪತ್ರ ನೀಡಿದ ಬಗ್ಗೆ ಚರಿತ್ರೆ ಪುಸ್ತಕ ನಿರ್ವಹಿಸುವುದು,
- ಕರ್ನಾಟಕ ಮೋಟಾರು ವಾಹನಗಳ ನಿಯಮಗಳಡಿ ಪ್ರತ್ಯಾಯೋಜಿತ ಅಧಿಕಾರದ ಮೇರೆಗೆ ಸಾರಿಗೆ ವಾಹನಗಳಿಗೆ ರಹದಾರಿ ನೀಡುವುದು,
- ಕೆಲವು ಅನುಸೂಚಿತ ತಾಲ್ಲೂಕು ಪ್ರದೇಶಗಳಲ್ಲಿ ಶಿಭಿರ ನಡೆಸಿ ಸಾರ್ವಜನಿಕರ ಕೆಲಸಕಾರ್ಯ ಮಾಡಿಕೊಡುವುದು,
- ಈ ಕಛೇರಿಯ ಖಜಾನೆಯಲ್ಲಿ ತೆರಿಗೆ ಶುಲ್ಕ ದಂಡ ಸಂಗ್ರಹಿಸಿ ಖಜಾನೆಗೆ ಸಂದಾಯಿಸುವುದು,